7. ಮಂಗಳೂರು ಬಳಿಯ ಪಿಲಿಕುಳದಲ್ಲಿ ಪಶ್ಚಿಮಘಟ್ಟ ಅಧ್ಯಯನ ವರದಿ ಬಿಡುಗಡೆ. (ದ.ಕ ಜಿಲ್ಲೆ)
8. ಕುಂದಾಪುರದಲ್ಲಿ ಕುಮ್ಕಿಬೆಟ್ಟ ಅಭಿವೃದ್ಧಿ ಬಗ್ಗೆ ಸಮಾಲೋಚನೆ.(ಉಡುಪಿ ಜಿಲ್ಲೆ)
9. ಕಾನು ಅರಣ್ಯಗಳ ಪುನಶ್ಚೇತನ ಯೋಜನೆ ಹಾಗೂ ಸಂರಕ್ಷಣಾ ಅಭಿಯಾನದ ಯಶೋಗಾಥೆ ವರದಿಯ ಬಿಡುಗಡೆ. (ಶಿವಮೊಗ್ಗ ಜಿಲ್ಲೆ)
10. ಉ.ಕ ಜಿಲ್ಲೆಯ ಬೆಟ್ಟ ಪ್ರದೇಶಗಳ ಅಭಿವೃದ್ಧಿ ಕುರಿತು ಸ್ಥಳದಲ್ಲಿಯೇ ಸಂವಾದ. (ಉ.ಕ ಜಿಲ್ಲೆ)
11. ಶರಾವತಿ ಕಣಿವೆಯ ಅಂಬಾರಗುಡ್ಡ ಸೂಕ್ಷ್ಮಪ್ರದೇಶದ ಸಂರಕ್ಷಣಾ ಯೋಜನೆ ಪ್ರಕಟ.(ಶಿವಮೊಗ್ಗ ಜಿಲ್ಲೆ)
12. ಹೊನ್ನಾವರ ತಾಲ್ಲೂಕಿನ ಶರಾವತಿ ನದಿತಪ್ಪಲು ಹಾಗೂ ಭಟ್ಕಳ ತಾಲ್ಲೂಕಿನ ಸರಸ್ವತಿ ನದಿತಪ್ಪಲು ಪ್ರದೇಶಗಳಲ್ಲಿ ಪರಿಸರ ಸಂರಕ್ಷಣೆಯ ಜಾಗೃತಿ ಅಭಿಯಾನ.(ಉ.ಕ ಜಿಲ್ಲೆ)

ಮೇ 22 ರಿಂದ ಜೂನ್ 5 ರವರೆಗಿನ ನಡೆಯುವ ಈ ಜೀವವೈವಿಧ್ಯ ಅಭಿಯಾನದಲ್ಲಿ ಜನಪ್ರತಿನಿಧಿಗಳು, ವಿದ್ಯಾರ್ಥಿಗಳು, ಶಿಕ್ಷಕರು, ಸಂಘಸಂಸ್ಥೆಗಳು, ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ಸೇರಿದಂತೆ ಸಮಾಜದ ವಿವಿಧ ವರ್ಗಗಳು ಭಾಗಿಯಾಗಲಿದ್ದಾರೆ. ಅರಣ್ಯ–ಪರಿಸರ ಇಲಾಖೆ ಅಧಿಕಾರಿಗಳು, ಪಂಚಾಯತ ರಾಜ್ ಇಲಾಖೆ ಅಧಿಕಾರಿಗಳು, ವಿಜ್ಞಾನಿಗಳು, ಪರಿಸರ ಕಾರ್ಯಕರ್ತರು, ಗ್ರಾಮ ಅರಣ್ಯ ಸಮಿತಿ, ಸಾಮಾಜಿಕ, ಧಾರ್ಮಿಕ ಮುಖಂಡರನ್ನು ಈ ಅಭಿಯಾನಕ್ಕೆ ಆಹ್ವಾನಿಸಲಾಗುತ್ತಿದೆ. ಹದಿನೈದು ದಿನಗಳ ಕಾಲ ನಡೆಯುವ ಈ ಜೀವವೈವಿಧ್ಯ ಸಂರಕ್ಷಣಾ ಜಾಗೃತಿ ಅಭಿಯಾನದಲ್ಲಿ, ರಾಜ್ಯಾದ್ಯಾಂತ ವಿವಿಧ ಸ್ಥಳಗಳಿಂದ ಲಭ್ಯವಾಗುವ ಅನುಭವ, ಮಾಹಿತಿ ಹಾಗೂ ಸಲಹೆಗಳನ್ನು ಆಧರಿಸಿ, ಜೀವವೈವಿಧ್ಯ ಮಂಡಳಿಯು ಸರ್ಕಾರಕ್ಕೆ ವಿಶೇಷ ವರದಿ ಸಲ್ಲಿಸಲಿದೆ.

ಈ ಅಭಿಯಾನವನ್ನು ಯಶಸ್ವಿಗೊಳಿಸಲು ನಾಡಿನ ಜನತೆಯ ಸಹಕಾರ ಕೋರುತ್ತೇವೆ.


**ಸಂಪರ್ಕ**

**ಶ್ರೀ ಅನಂತ ಹೆಗಡೆ ಅಶೀಸರ**
**ಅಧ್ಯಕ್ಷರು**

**ಡಾ. ವೀರೇಂದರ್ ಸಿಂಗ್, ಭಾ.ಅ.ಸೇ,**
**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ**

**ಕರ್ನಾಟಕ ಜೀವವೈವಿಧ್ಯ ಮಂಡಳಿ**
ನೆಲ ಮಹಡಿ, "ವನವಿಕಾಸ", 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು – 560 003. ಕರ್ನಾಟಕ.
ದೂರವಾಣಿ : 080–23448783, ಫ್ಯಾಕ್ಸ್ : 2344 0535
ಇ–ಮೇಲ್ : kbb-ka@nic.in ಅಂತರ್ಜಾಲ : kbb.karnataka.gov.in


**ಕರ್ನಾಟಕ ಸರ್ಕಾರ**
**ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ**

# ಕರ್ನಾಟಕ ಜೀವವೈವಿಧ್ಯ ಮಂಡಳಿ

22 MAY 2020
INTERNATIONAL DAY FOR BIOLOGICAL DIVERSITY
Our solutions are in nature

Convention on Biological Diversity




**ದಿನಾಂಕ 22 ಮೇ 2020ರಂದು**

## ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ

ಅವರಿಂದ ಬೆಂಗಳೂರಿನಲ್ಲಿ ಚಾಲನೆಗೊಳ್ಳಲಿರುವ

## ಅಂತರ ರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ

**(22 ಮೇ 2020)**

**ಹಾಗೂ**

## ಜೀವವೈವಿಧ್ಯ ಸಂರಕ್ಷಣೆ ಜಾಗೃತಿ ಅಭಿಯಾನ

**(22–5–2020 ರಿಂದ 5–6–2020)**

ವಿಶ್ವಸಂಸ್ಥೆಯ ಆಶ್ರಯದಲ್ಲಿ ಕ್ರಿ.ಶ. 2000ರಿಂದ ಮೇ 22 ರಂದು ಪ್ರತಿವರ್ಷ ಜಗತ್ತಿನಾದ್ಯಂತ "ಅಂತರ ರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯನ್ನು" ಆಚರಿಸಿಕೊಂಡು ಬರಲಾಗುತ್ತಿದೆ. ನಮ್ಮ ಬದುಕನ್ನು ಪೋಷಿಸುವ ಅಸಂಖ್ಯ ಬಗೆಯ ಸಸ್ಯ, ಪ್ರಾಣಿ ಹಾಗೂ ಸೂಕ್ಷ್ಮಾಣುಜೀವಿಗಳು ಮತ್ತು ಅವು ನಿರ್ಮಿಸುವ ಪರಿಸರದ ಮಹತ್ವವನ್ನು ಸಾರುವ ಹಾಗೂ ಅದರ ಕುರಿತಾಗಿ ಜನಜಾಗೃತಿ ಮೂಡಿಸುವುದೇ ಈ ಆಚರಣೆಯ ಪ್ರಮುಖ ಉದ್ದೇಶ. ನಮ್ಮ ದೇಶದಲ್ಲಿ ಕೇಂದ್ರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಹಾಗೂ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಆಶ್ರಯದಲ್ಲಿ ದೇಶದಾದ್ಯಂತ ಈ ದಿನಾಚಾರಣೆಯನ್ನು ಹಲವು ಮಜಲುಗಳಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ. ಜೀವವೈವಿಧ್ಯ ಸಂರಕ್ಷಣೆಯ ಅಪಾರ ಮಹತ್ವವನ್ನು ಮನಗಂಡು, ಸನ್ಮಾನ್ಯ ಪ್ರಧಾನ ಮಂತ್ರಿಗಳ ಪ್ರಧಾನ ವೈಜ್ಞಾನಿಕ ಸಲಹೆಗಾರರ ಮಾರ್ಗದರ್ಶನದಲ್ಲಿ ರಾಷ್ಟ್ರಮಟ್ಟದ ವಿಶೇಷ "ಜೀವವೈವಿಧ್ಯ ಮಿಶನ್"ಗೆ ಕೂಡ ಚಾಲನೆ ನೀಡಲಾಗಿದೆ. ಹೀಗಾಗಿ, ಜೀವವೈವಿಧ್ಯ ಸಂರಕ್ಷಿಸಬೇಕಾದ ಜಾಗೃತಿ ಎಲ್ಲೆಡೆ ಮೂಡುತ್ತಿದೆ.

ಈ ಹಿನ್ನೆಲೆಯಲ್ಲಿ ಪ್ರತಿವರ್ಷದಂತೆ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಈ ಜಾಗತಿಕ ದಿನಾಚರಣೆಯನ್ನು ಈ ವರ್ಷವೂ ವಿಶೇಷ ಆಸ್ಥೆಯಿಂದ ಆಚರಿಸುತ್ತಿದೆ. ರಾಜ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಗಳ ವಿಶೇಷ ಸಹಭಾಗಿತ್ವದೊಂದಿಗೆ ಇದು ನಡೆಯಲಿದೆ. ಕೋವಿಡ್–19 ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸರ್ಕಾರವು ವಿಧಿಸಿರುವ

ಕಟ್ಟುಪಾಡುಗಳಿಗೆ ಒಳಪಟ್ಟು, ಸ್ಥಳೀಯವಾಗಿ ಸಣ್ಣ-ಸಣ್ಣ ಚಟುವಟಿಕೆಗಳನ್ನು ಸಂಘಟಿಸುವ ಮೂಲಕವೇ ಇದನ್ನು ಆಚರಿಸಲು ಉದ್ದೇಶಿಸಲಾಗಿದೆ. ಇದರ ಸ್ವರೂಪ ಈ ರೀತಿಯಲ್ಲಿರಲಿದೆ.

**ಜೀವವೈವಿಧ್ಯ ದಿನಾಚರಣೆ:** ರಾಜ್ಯಮಟ್ಟದಲ್ಲಿ ಬೆಂಗಳೂರಿನಲ್ಲಿ ಮೇ 22 ರಂದು ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಜೀವವೈವಿಧ್ಯ ದಿನಾಚರಣೆ ಹಾಗೂ ಜೀವವೈವಿಧ್ಯ ಸಂರಕ್ಷಣಾ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. ರಾಜ್ಯ ಮಟ್ಟದಲ್ಲಿ ಜೀವವೈವಿಧ್ಯ ಸಂರಕ್ಷಣೆ ಕುರಿತು ವಿದ್ಯಾರ್ಥಿಗಳಿಗೆ ನಿಬಂಧ ಸ್ಪರ್ಧೆಗಳನ್ನು ನಡೆಸಿ ಬಹುಮಾನ ನೀಡಲಾಗುತ್ತದೆ. 3 ಜನಸಾಧಕರಿಗೆ ವಾರ್ಷಿಕ ಜೀವವೈವಿಧ್ಯ ಪ್ರಶಸ್ತಿ ನೀಡಲಾಗುತ್ತದೆ. ಸಂಶೋಧನಾ ವರದಿಗಳ ಬಿಡುಗಡೆ ನಡೆಯಲಿದೆ.

ಶಿವಮೊಗ್ಗದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಕೆ.ಎಸ್. ಈಶ್ವರಪ್ಪರವರು ಹಾಗೂ ಬಳ್ಳಾರಿಯಲ್ಲಿ ಮಾನ್ಯ ಶ್ರೀ ಆನಂದಸಿಂಗ್ ಅರಣ್ಯಸಚಿವರು ಈ ಕುರಿತ ಸರಳ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಆಶ್ರಯದಲ್ಲಿ ರಾಜ್ಯಾದ್ಯಂತ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ಸರಳವಾಗಿ ಈ ದಿನವನ್ನು ಆಚರಿಸಲಿವೆ. ತಮ್ಮ ವಿದ್ಯಾರ್ಥಿಗಳಿಗೆ ಜೀವವೈವಿಧ್ಯ ಸಂರಕ್ಷಣೆಯ ಮಹತ್ವ ತಿಳಿಸುವ ಕಾರ್ಯವನ್ನು ಮಾಡುವಂತೆ ರಾಜ್ಯಾದ್ಯಂತ ಶಿಕ್ಷಣಸಂಸ್ಥೆಗಳಿಗೆ ವಿನಂತಿಸಲಾಗಿದೆ. ಸಾಮಾಜಿಕ ಜಾಲತಾಣ, ಮಾಧ್ಯಮಗಳ ಮೂಲಕ ಹಲವು ಸಂವಾದಗಳು, ಸಂದರ್ಶನ, ಚರ್ಚೆ ನಡೆಯಲಿವೆ. 2030 ಮತ್ತು 2050ರ ಜೀವವೈವಿಧ್ಯ ಮಿಶನ್ ಕಾರ್ಯಸೂಚಿ ಬಗ್ಗೆ ಕೂಡ ಮಾಹಿತಿ ಪ್ರಸರಣ ಕಾರ್ಯ ಹಮ್ಮಿಕೊಳ್ಳಲಾಗುವುದು.

**ಜೀವವೈವಿಧ್ಯ ಸಂರಕ್ಷಣಾ ಜಾಗೃತಿ ಅಭಿಯಾನ:** ಈ ಅಭಿಯಾನದ ಹಿನ್ನೆಲೆಯಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ವಿವಿಧ ಇಲಾಖೆಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಸಂಘ-ಸಂಸ್ಥೆಗಳ ಸಹಕಾರದೊಂದಿಗೆ ವಿವಿಧ ಚಟುವಟಿಕೆಗಳನ್ನು ನಡೆಸಲು ಉದ್ದೇಶಿಸಿದೆ. ಇದು ಮೇ 22 ರಿಂದ ಜೂನ್ 5 ರವರೆಗೆ ನಡೆಯಲಿದೆ. ಕೋವಿಡ್ ಲಾಕ್‌ಡೌನ್ ನಿಯಮಗಳನ್ನು ಪಾಲಿಸಿಕೊಂಡು ಸರಳವಾಗಿ ಈ ಚಟುವಟಿಕೆಗಳನ್ನು ನಡೆಸಲು ಸೂಚಿಸಲಾಗಿದೆ.

**ಈ ಅಭಿಯಾನದ ಸೂಚಿತ ಚಟುವಟಿಕೆಗಳು:**

- **ಸ್ಥಳ ಚಟುವಟಿಕೆಗಳು:** ವೃಕ್ಷಾರೋಪಣ, ಬೀಜದುಂಡೆ ತಯಾರಿ, ಕೆರೆ, ನದಿಮೂಲ ಸಮೀಕ್ಷೆ, ಸೂಕ್ಷ್ಮ ಜೀವವೈವಿಧ್ಯ ತಾಣಗಳನ್ನು ಗುರುತಿಸುವಿಕೆ, ಔಷಧೀ ಸಸ್ಯವನ ನಿರ್ಮಾಣ, ವಿನಾಶದ ಅಂಚಿನ ಸೂಕ್ಷ್ಮ ಅರಣ್ಯ ಪ್ರದೇಶಗಳ ಸಮೀಕ್ಷೆ ಇತ್ಯಾದಿ ಕಾರ್ಯಚಟುವಟಿಕೆಗಳು ನಡೆಯಲಿವೆ.
- **ಜೀವವೈವಿಧ್ಯ ಸೂಕ್ಷ್ಮತಾಣಗಳಿಗೆ ಭೇಟಿ, ಸಮೀಕ್ಷೆ:** ಅಭಿಯಾನದಲ್ಲಿ ಪಾರಂಪರಿಕ ಜೀವವೈವಿಧ್ಯ ತಾಣಗಳಿಗೆ ಭೇಟಿ ನೀಡಿ ಸಂರಕ್ಷಣೆಗೆ ಚಾಲನೆ ನೀಡಲಾಗುತ್ತದೆ. ನಲ್ಲೂರು, ಹೊಗ್ರೇಕಾನುಗಿರಿ, ಅಂಬಾರಗುಡ್ಡ, ಹಳೇಸೊರಬ, ಹೊಸಗುಂದ (ಶಿವಮೊಗ್ಗಾ), ಸೋಂದಾ, ಮುಂಡಿಗೆಕೆರೆ, ಕತ್ತಲೆಕಾನು(ಉ.ಕ) ಯೋಗಿಕೊಳ್ಳ (ಬೆಳಗಾವಿ), ಅಮೃತಮಹಲ್ ಕಾವಲ್ (ತಿಪಟೂರು) ಕೊಡಗಿನ ಭೂಕುಸಿತ ಪ್ರದೇಶ, ಕೊಟ್ಟಿಗೆಹಾರ (ಚಿಕ್ಕಮಗಳೂರು) ಕೊಪ್ಪಳದ ಜರಿಬೆಟ್ಟ ಮುಂತಾದ ಪರಿಸರ ಸೂಕ್ಷ್ಮ ಪ್ರದೇಶಗಳ ಪರಿಸ್ಥಿತಿ ಸಮೀಕ್ಷೆ ಮಾಡುವ ಕಾರ್ಯಕ್ರಮ ನಿಶ್ಚಯಿಸಲಾಗಿದೆ.
- **ಸಸ್ಯಗಣತಿ ವರದಿ:** ರಾಷ್ಟ್ರೀಯ ಔಷಧಿಮೂಲಿಕಾ ಮಂಡಳಿ ಹಾಗೂ ಕರ್ನಾಟಕದಲ್ಲಿ ಆಯಾ ಜಿಲ್ಲೆಗಳ ಸಸ್ಯ ಗಣತಿ ವರದಿ ಸಿದ್ಧಪಡಿಸಿದೆ. ಇವನ್ನು ಆಯಾ ಜಿಲ್ಲೆಗಳಲ್ಲಿ ಬಿಡುಗಡೆ ಮಾಡಿ ಸ್ಥಾನಿಕರಿಗೆ ಮಾಹಿತಿ ನೀಡಲಾಗುವುದು. ಔಷಧಿಮೂಲಿಕಾ ಮಂಡಳಿಗಳ ಸಹಯೋಗದಲ್ಲಿ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜೀವವೈವಿಧ್ಯ ಮಂಡಳಿಯು ಸ್ಥಳ ಸಮೀಕ್ಷೆಯೊಂದಿಗೆ ಸಸ್ಯಗಣತಿ ಕೈಗೊಂಡು ವರದಿ ಸಿದ್ಧಪಡಿಸಿದೆ. ಮೇ 22 ಜೂನ್ 5 ರವರೆಗಿನ ಅಭಿಯಾನದಲ್ಲಿ ಆಯಾ ಜಿಲ್ಲೆಗಳ ಸಸ್ಯ ಗಣತಿ ವರದಿ ಸಿದ್ಧಪಡಿಸಿದೆ. ಇವನ್ನು ಆಯಾ ಜಿಲ್ಲೆಗಳಲ್ಲಿ ಬಿಡುಗಡೆ ಮಾಡಿ ಸ್ಥಾನಿಕರಿಗೆ ಮಾಹಿತಿ ನೀಡಲಾಗುವುದು.
- **ಸನ್ಮಾನ/ಗೌರವ:** ಜಿಲ್ಲಾ/ತಾಲ್ಲೂಕು/ಗ್ರಾಮ ಮಟ್ಟದಲ್ಲಿ ಜೀವವೈವಿಧ್ಯ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದವರನ್ನು ಗುರುತಿಸಿ ಅಭಿನಂದಿಸುವ ಕಾರ್ಯ ನಡೆಯಲಿದೆ.
- **ಜೀವವೈವಿಧ್ಯ ವರದಿಗಳ ಬಿಡುಗಡೆ :** ಗ್ರಾಮ ಪಂಚಾಯತ, ತಾಲೂಕಾ ಪಂಚಾಯತ, ಜಿಲ್ಲಾ ಪಂಚಾಯತ ಮಟ್ಟದಲ್ಲಿ ಜೀವವೈವಿಧ್ಯ ಪರಿಸ್ಥಿತಿ ವರದಿ ಸಿದ್ದಪಡಿಸಲಾಗಿದೆ. ಈ ಕುರಿತು ಆಯಾ ಪ್ರದೇಶದ ಜನತೆಗೆ ಮಾಹಿತಿ ನೀಡಲಾಗುತ್ತದೆ. ಜೀವವೈವಿಧ್ಯ ದಾಖಲಾತಿ ನಡೆಸಬೇಕಾದ ಹಳ್ಳಿಗಳಲ್ಲಿ ಈ ಕೆಲಸ ಚುರುಕುಗೊಳಿಸಲು ಅಭಿಯಾನದಲ್ಲಿ ಆದ್ಯತೆ ನೀಡಲಾಗುತ್ತದೆ.
- **ತಳಮಟ್ಟದ ಜೀವವೈವಿಧ್ಯ ಸಂಘಟನೆ ಚುರುಕುಗೊಳಿಸುವುದು:** ರಾಜ್ಯದ 6000 ಗ್ರಾಮ ಪಂಚಾಯತಗಳಲ್ಲಿ ಜೀವವೈವಿಧ್ಯ ಸಮಿತಿಗಳ ರಚನೆಯಾಗಿದೆ. ತಳಮಟ್ಟದಲ್ಲಿ ಇರುವ ಈ ಪಂಚಾಯತ ಜೀವವೈವಿಧ್ಯ ಸಮಿತಿಗಳನ್ನು ಕ್ರಿಯಾಶೀಲಗೊಳಿಸಲು ಈ ಅಭಿಯಾನ ಒತ್ತು ನೀಡಲಿದೆ.
- **ಕೆಲವು ಪ್ರಮುಖ ರಚನಾತ್ಮಕ ಕಾರ್ಯಯೋಜನೆಗಳು :**
  1. ಶಿವಮೊಗ್ಗ ಮಹಾನಗರ ಪಾಲಿಕೆಯ ಸ್ಮಾರ್ಟ್-ಸಿಟಿ ಯೋಜನೆಯ ಮೂಲಕ, ಹಸಿರು ವಲಯ ನಿರ್ಮಾಣ ಕಾರ್ಯಯೋಜನೆಗೆ ಚಾಲನೆ. (ಶಿವಮೊಗ್ಗ ಜಿಲ್ಲೆ)
  2. ಶಿವಮೊಗ್ಗ ನಗರದ ಪಶ್ಚಿಮಘಟ್ಟದ ವೈವಿಧ್ಯ ಬಿಂಬಿಸುವ ಚಂದನವನಕ್ಕೆ ಅಧ್ಯಯನಕಾರರು ಹಾಗೂ ವಿದ್ಯಾರ್ಥಿಗಳ ಭೇಟಿ. (ಶಿವಮೊಗ್ಗ ಜಿಲ್ಲೆ)
  3. ಗುಡಿಬಂಡೆ ಊರಿನ ಬೆಟ್ಟಕ್ಕೆ ಜೀವವೈವಿಧ್ಯ ಕ್ಷೇತ್ರದ ಕಾರ್ಯಕರ್ತರ ಭೇಟಿ. (ಚಿಕ್ಕಬಳ್ಳಾಪುರ ಜಿಲ್ಲೆ)
  4. ಕುಮಾರಧಾರಾ ಕಣಿವೆಯ ಉರುಂಬಿ ನದಿ ತೀರಕ್ಕೆ ಜೀವವೈವಿಧ್ಯ ಮಂಡಳಿ ಭೇಟಿ. (ದ.ಕ ಜಿಲ್ಲೆ)
  5. ಚಂದ್ರಗುತ್ತಿ ದೇವರಕಾಡು ನಿರ್ಮಾಣ ಕಾರ್ಯ ಆರಂಭ. (ಶಿವಮೊಗ್ಗ ಜಿಲ್ಲೆ)
  6. ಹೊಗರೇಕಾನುಗಿರಿ ಸಂರಕ್ಷಣಾ ಕಾರ್ಯತಂತ್ರ ಯೋಜನೆಯ ಪ್ರಕಟಣೆ. (ಚಿಕ್ಕಮಗಳೂರು ಜಿಲ್ಲೆ)